ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು

76 (212); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ಶಿವಮೊಗ್ಗ ಜಿಲ್ಲೆ ಸೊರಬ ಪಟ್ಟಣದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಜಮೀನು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಮಂಜೂರಾದ ಜಮೀನಿನ ವಿಸ್ತೀರ್ಣವೆಷ್ಟು ಮತ್ತು ಮಂಜೂರಾಗಿರುವ ಅನುದಾನದ ಮೊತ್ತವೆಷ್ಟು; (ಮಾಹಿತಿ ನೀಡುವುದು);

ಇ) ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ ಮತ್ತು ಯಾವಾಗ ಅಭಿವೃದ್ಧಿಪಡಿಸಲಾಗುವುದು? (ಮಾಹಿತಿ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು

ಆ) ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಹಿರೆಶಕುನ ಗ್ರಾಮದ ಸರ್ವೆ ನಂ.113ರಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆಗಾಗಿ 20.00 ಎಕರೆ ಸರ್ಕಾರಿ ಜಮೀನನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೆ ಮಂಜೂರಾತಿಯಾಗಿದೆ. ಸದರಿ ಜಮೀನಿನ ಮೌಲ್ಯ ₹. 3,40,045/–ಗಳಾಗಿದ್ದು, ಈ ಮೊತ್ತವನ್ನು ಕೆಎಸ್ಎಸ್ಐಡಿಸಿ ನಿಗಮವು ದಿ. 14–08–2009 ರಂದು ತಹಶೀಲ್ದಾರ್, ಸೊರಬ ರವರ ಕಚೇರಿಯಲ್ಲಿ ಸಂದಾಯ ಮಾಡಿದೆ.

ಇ) ಸದರಿ ಭೂಮಿಯಲ್ಲಿ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ನಿರ್ವಹಿಸಬೇಕಾಗಿರುತ್ತದೆ.

ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಮಂಜೂರಾಗಿರುವ 20.00 ಎಕರೆ ಸರ್ಕಾರಿ ಜಮೀನಿನಲ್ಲಿ ಅನಧಿಕೃತ ಸಾಗುವಳಿ ನಡೆಯುತ್ತಿದ್ದು, ಕಂದಾಯ ಇಲಾಖೆ ಮತ್ತು ನಿಗಮದಿಂದ ಹಲವು ಬಾರಿ ಜಂಟಿ ಸರ್ವೆ ಕಾರ್ಯ ಕೈಗೊಂಡಾಗಲೆಲ್ಲಾ ರೈತರುಗಳು ಜಮೀನಿನ ಹಸ್ತಾಂತರಕ್ಕೆ ವಿರೋಧವನ್ನು ವ್ಯಕ್ತಪಡಿಸಿ, ಸರ್ವೆ ಕಾರ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕಂದಾಯ ಇಲಾಖೆಯವರು, ಜಮೀನನ್ನು ಭೌತಿಕವಾಗಿ ನಿಗಮಕ್ಕೆ ಹಸ್ತಾಂತರಿಸಲು ಸಾಧ್ಯವಾಗಿರುವುದಿಲ್ಲ.

ಅನಧಿಕೃತ ಸಾಗುವಳಿದಾರರನ್ನು ಆದಷ್ಟು ಬೇಗ ಜಮೀನಿನಿಂದ ತೆರವುಗೊಳಿಸಿ, ಗಡಿ ಗುರುತುವಿನೊಂದಿಗೆ ಹಸ್ತಾಂತರ ಮಾಡುವುದಾಗಿ ತಹಶೀಲ್ದಾರ್, ಸೊರಬ ರವರು ತಿಳಿಸಿರುತ್ತಾರೆ. ಅನಧಿಕೃತ ಸಾಗುವಳಿದಾರರನ್ನು ಮಂಜೂರಾದ ಜಮೀನಿನಿಂದ ತೆರವುಗೊಳಿಸಿ, ಗಡಿ ಗುರುತುವಿನೊಂದಿಗೆ ನಿಗಮಕ್ಕೆ ಭೌತಿಕವಾಗಿ ಹಸ್ತಾಂತರಿಸಿದ ನಂತರದಲ್ಲಿ ಕೆಎಸ್ಎಸ್ಐಡಿಸಿ ವತಿಯಿಂದ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಬೇಕಾಗಿರುತ್ತದೆ.

ಕಳ್ಳತನಗಳ ಪ್ರಕರಣ ತಡೆಗಟ್ಟುವುದು

77 (213); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ಸೊರಬ ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ಕಳ್ಳತನಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಎಷ್ಟು ಕಳ್ಳತನ ಪ್ರಕರಣಗಳು ದಾಖಲಾಗಿರುತ್ತವೆ, ಈ ಪೈಕಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

ಇ) ಕಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಯಾವುದಾದರೂ ವಿಶೇಷ ಯೋಜನೆ ರೂಪಿಸಲಾಗಿದೆಯೇ? (ವಿವರ ನೀಡುವುದು)